# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 02
ಸದಸ್ಯರ ಹೆಸರು : ಶ್ರೀ ಕೆ.ಸಿ.ಕೊಂಡಯ್ಯ
(ಸ್ಥಳೀಯ ಸಂಸ್ಥೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 13-12-2018
ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

| ಪ್ರಶ್ನೆ | ಉತ್ತರ |
|---|---|
| (ಅ) ರಾಜ್ಯಾದ್ಯಂತ ಇರುವ ಸರ್ಕಾರಿ ಪ್ರೌಢ ಶಾಲೆಗಳ ಸಂಖ್ಯೆ ಎಷ್ಟು; (ಬಾಲಕ ಮತ್ತು ಬಾಲಕಿಯರ ಶಾಲೆಗಳ ಪ್ರತ್ಯೇಕ ವಿವರ ನೀಡುವುದು) | ರಾಜ್ಯಾದ್ಯಂತ ಇರುವ ಸರ್ಕಾರಿ ಪ್ರೌಢ ಶಾಲೆಗಳ ಸಂಖ್ಯೆ ಕೆಳಕಂಡಂತಿದೆ. |
| (ಆ) ಆ ಪೈಕಿ ಎಷ್ಟು ಶಾಲೆಗಳಲ್ಲಿ ಮೂಲ ಸೌಕರ್ಯಗಳನ್ನು ಒದಗಿಸಲಾಗಿದೆ; (ವಿವರವಾದ ಮಾಹಿತಿ ನೀಡುವುದು) | ರಾಜ್ಯದಲ್ಲಿನ ಸರ್ಕಾರಿ ಪ್ರೌಢಶಾಲೆಗಳಲ್ಲಿ ಈ ಕೆಳಕಂಡಂತೆ ಎಲ್ಲಾ ಅಗತ್ಯ ಮೂಲಭೂತ ಸೌಕರ್ಯವನ್ನು ಒದಗಿಸಲಾಗಿದೆ. |

| ಸರ್ಕಾರಿ ಪ್ರೌಢ ಶಾಲೆಗಳು | | | |
|---|---|---|---|
| ಬಾಲಕರ | ಬಾಲಕಿಯರ | ಸಹ ಶಿಕ್ಷಣ | ಒಟ್ಟು |
| 52 | 175 | 4468 | **4695** |

- ಗಂಡು ಮಕ್ಕಳ ಶೌಚಾಲಯ ಹೊಂದಿರುವ ಶಾಲೆಗಳು- 4520
- ಹೆಣ್ಣು ಮಕ್ಕಳ ಶೌಚಾಲಯ ಹೊಂದಿರುವ ಶಾಲೆಗಳು- 4643
- ವಿಶೇಷ ಮಕ್ಕಳ ಶೌಚಾಲಯ ಹೊಂದಿರುವ ಶಾಲೆಗಳು- 1503
- ಆಟದ ಮೈದಾನ ಹೊಂದಿರುವ ಶಾಲೆಗಳು- 3973
- ಗ್ರಂಥಾಲಯ ಸೌಲಭ್ಯ ಹೊಂದಿರುವ ಶಾಲೆಗಳು- 1852

ಕಟ್ಟಡ ದುರಸ್ಥಿ ಅವಶ್ಯಕತೆ ಇರುವ ಶಾಲೆಗಳಿಗೆ ಹಾಗೂ ವಿದ್ಯಾರ್ಥಿ ಸಂಖ್ಯೆಗಳಿಗನುಗುಣವಾಗಿ ಹೆಚ್ಚುವರಿ ಕೊಠಡಿ ಅಗತ್ಯವಿರುವ ಶಾಲೆಗಳಿಗೆ 2018-19ನೇ ಸಾಲಿನಲ್ಲಿ ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾಗಿದೆ.

| ಕ್ರ ಸಂ. | ಕಾಮಗಾರಿ ಹೆಸರು | ಶಾಲೆಗಳ ಸಂಖ್ಯೆ | ಕೊಠಡಿಗಳ ಸಂಖ್ಯೆ | ಬಿಡುಗಡೆಯಾದ ಅನುದಾನದ (ರೂ ಲಕ್ಷಗಳಲ್ಲಿ) |
|---|---|---|---|---|
| 1 | ಪ್ರೌಢ ಶಾಲಾ ಕೊಠಡಿಗಳ ನಿರ್ಮಾಣ | 721 | 1286 | 11035.50 |
| 2 | ಪ್ರೌಢ ಶಾಲಾ ಕೊಠಡಿ ದುರಸ್ಥಿ | 939 | 1808 | 1989.44 |
| 3 | ಕುಡಿಯುವ ನೀರು ಮತ್ತು ಶೌಚಾಲಯ ನಿರ್ವಹಣೆ | 4695 | - | 201.88 |
| ಒಟ್ಟು | | | **3094** | **13226.82** |

| ಪ್ರಶ್ನೆ | ಉತ್ತರ |
|---|---|
| (ಇ) ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕು, ಕಮಲಾಪುರ ಪಟ್ಟಣದಲ್ಲಿರುವ ಸರ್ಕಾರಿ ಬಾಲಕಿಯರ ಪ್ರೌಢಶಾಲೆಗೆ ಮೂಲಭೂತ ಸೌಕರ್ಯಗಳ ಕೊರತೆಯಿದ್ದು, ಅದನ್ನು ನೀಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? | 2018-19ನೇ ಸಾಲಿನಲ್ಲಿ ಹೆಚ್.ಕೆ.ಆರ್.ಡಿ.ಬಿ ಯೋಜನೆಯಡಿ ಸರ್ಕಾರಿ ಬಾಲಕಿಯರ ಪ್ರೌಢ ಶಾಲೆ, ಕಮಲಾಪುರ ಶಾಲೆಗೆ 02 ಕೊಠಡಿ ನಿರ್ಮಾಣಕ್ಕಾಗಿ ರೂ.30.00 ಲಕ್ಷ ಅನುದಾನ ಮಂಜೂರಾಗಿದೆ. ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್. ಬಳ್ಳಾರಿ ವಿಭಾಗಕ್ಕೆ ವಹಿಸಲಾಗಿದೆ ಹಾಗೂ 2018-19ನೇ ಸಾಲಿನ ರಾಜ್ಯ ವಲಯದ ಯೋಜನೆಯಡಿ ಸರ್ಕಾರಿ ಬಾಲಕಿಯರ ಪ್ರೌಢ ಶಾಲೆ, ಕಮಲಾಪುರ ಈ ಶಾಲೆಗೆ 01 ಕೊಠಡಿ ನಿರ್ಮಾಣಕ್ಕಾಗಿ ರೂ.15.75 ಲಕ್ಷ ಅನುದಾನ ಮಂಜೂರಾಗಿದ್ದು, ಸದರಿ ಕಾಮಗಾರಿಗಳನ್ನು ಪಿ.ಆರ್.ಇ.ಡಿ. ಬಳ್ಳಾರಿ ಇವರಿಗೆ ವಹಿಸಲಾಗಿದೆ. ಕಾಮಗಾರಿಗಳನ್ನು ಟೆಂಡರ್ ಮೂಲಕ ಕೈಗೊಂಡು ಅನುಷ್ಠಾನಗೊಳಿಸಲಾಗುತ್ತಿದೆ. |

ಇಡಿ 329 ಯೋಸಕ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ